# ಸಾಮಾನ್ಯರ ಅಸಾಮಾನ್ಯ ಚರಿತ್ರೆ



ಎಂ.ಎಸ್. ಆಶಾದೇವಿ

ಸುಮಾರು ಎರಡು ವರ್ಷಗಳ ಹಿಂದಿನ ಮಾತಿರಬೇಕು. ನನ್ನ ಕೆಲವು ಬರಹಗಳನ್ನು ಇಂಗ್ಲಿಷಿಗೆ ಅನುವಾದ ಮಾಡಿದ ಮೇಷ್ಟ್ರ ಜೊತೆ ಅನುವಾದಗಳನ್ನು ಪರಿಶೀಲಿಸುವ ಕೆಲಸವಿತ್ತು. ಹಿಂದಿನ ದಿನವೇ ಭೇಟಿ ಮಾಡಬೇಕೆಂದು ಲೀಲಾ ಸಂಪಿಗೆ ಕೇಳಿದ್ದರು. ಲೈಬ್ರರಿಗೇ ಬರುವಂತೆ ಅವರಿಗೆ ಹೇಳಿದ್ದೆ. ಆದರೆ ಅನಿರೀಕ್ಷಿತವಾಗಿ ಲೈಬ್ರರಿಗೆ ರಜಾ ಘೋಷಿಸಿದ್ದರಿಂದ ಕಾಫಿ ಹೌಸ್‌ನಲ್ಲಿ ಕೂತು ಕೆಲಸ ಮಾಡುವುದೆಂದು ತೀರ್ಮಾನಿಸಿ ಲೀಲಾ ಅವರಿಗೂ ಅದನ್ನು ಹೇಳಿದೆ. ಅವರ ಜೊತೆ ಜಯಕುಮಾರ್ ಮತ್ತು ಇನ್ನೊಬ್ಬರು. ಅವರು ಯಾರೆಂದು ಈ ಕ್ಷಣಕ್ಕೆ ನೆನಪಾಗುತ್ತಿಲ್ಲ. ಅವರಿಗೆ ಕಾಫಿ ಕೊಡಿಸಿ, ಮಾತುಕತೆಯನ್ನು ಬೇಗ ಮುಗಿಸಿ ಪುಸ್ತಕದ ಕೆಲಸಕ್ಕೆ ವಾಪಸಾಗಬೇಕೆನ್ನುವುದು ನನ್ನ ಇರಾದೆಯಾಗಿತ್ತು. ಜಯಕುಮಾರ್ ಅವರಿಗೆ ನಾನು 'ಯಾವ ಕಾಫಿ ಬೇಕು ಹೇಳಿ' ಎಂದೆ. ಅವರಿದ್ದೋರು, 'ನಮಗೆ ತಿನ್ನೋಕೂ ಏನಾದರೂ ಕೊಡಿಸ್ತೀರಾ ಮೇಡಂ' ಎಂದರು. ಆ ಗಳಿಗೆಯಲ್ಲಿ ಅವರ ಮಗುವಿನಂತಹ ಮುಗ್ಧತೆ ಮತ್ತು ಪ್ರಾಮಾಣಿಕತೆ ನನ್ನನ್ನು ಅನಾಯಾಸವಾಗಿ ತಟ್ಟಿತು. 'ಅದಕ್ಕೇನು, ಏನು ಬೇಕೋ ತೊಗೊಳ್ಳಿ' ಎಂದು ತಿಂಡಿಗಳಿಟ್ಟಿದ್ದ ಶೆಲ್ಫ್‌ನ ಹತ್ತಿರ ಕರೆದುಕೊಂಡು ಹೋದೆ. ಆ ಬೆಲೆಗಳನ್ನು ನೋಡಿದ್ದೇ ಅವರು 'ಬೇಡ ಬಿಡಿ ಮೇಡಂ, ಬರೀ ಕಾಫಿ ಕೊಡ್ಸಿ ಸಾಕು, ಕಾಫಿನೇ ಆ ಪಾಟಿ ಬೆಲೆ' ಎಂದರು. ಬಲವಂತವಾಗಿ ನಾನೇ ಕೆಲವನ್ನು ಆರ್ಡರ್ ಮಾಡಿದೆ. ಅದನ್ನು ತಿನ್ನುತ್ತಲೇ ಗಂಭೀರವಾದ ಸಾಮಾಜಿಕ, ಸಾಂಸ್ಕೃತಿಕ ಸಂಗತಿಗಳನ್ನು ಅವರು ಚರ್ಚಿಸುತ್ತಿದ್ದರು. ಮನೆಗೆ ಬಂದ ಮೇಲೆ ನನಗೆ, ಹೋರಾಟಗಾರರ ಬದುಕಿನ ಬಗೆಗೆ, ಅವರ ವ್ಯಕ್ತಿತ್ವದ ಬಗೆಗೆ ಅನೇಕ ಪ್ರಶ್ನೆಗಳು ಕಾಡಿದವು. ನೂರಾರು ಹೋರಾಟಗಳಲ್ಲಿ ಭಾಗವಹಿಸಿದ್ದ ಜಯಕುಮಾರ್ ಉಳಿಸಿಕೊಂಡ ಮುಗ್ಧತೆ ಮತ್ತು ಜೀವನಪ್ರೀತಿಗಳು ಮರೆಯಲಾಗದ ಚಿತ್ರವಾಗಿ ಮನಸ್ಸಿನಲ್ಲಿ ಉಳಿದುಕೊಂಡಿದೆ. ಆದರೆ ಅದು ಅವರ ಕೊನೆಯ ಚಿತ್ರವಾಗಬಹುದು, ಭೇಟಿಯಾಗಬಹುದು ಎನ್ನುವ ಸಣ್ಣ ಅಂದಾಜೂ ಇರಲಿಲ್ಲ.

ಜಯಕುಮಾರ್ ಅವರ 'ಕಾಡು ಹಾದಿಯ ಬೆಳಕಿನ ಜಾಡು' ನಿಜಕ್ಕೂ ಬೆರಗು ಹುಟ್ಟಿಸುವ ಕೃತಿ. ತಿಂಡಿಯೊಂದನ್ನು ಕುತೂಹಲದಿಂದ ನೋಡಿ, ಬಯಸಿದ ವ್ಯಕ್ತಿಯ ಬದುಕು ಇಷ್ಟೆಲ್ಲ ಅನೂಹ್ಯವಾದ ದಾರಿಗಳಲ್ಲಿ ನಡೆದ ಪ್ರಯಾಣ ಎನ್ನುವುದು ಜಯಕುಮಾರ್ ಅವರನ್ನು ಬೇರೆಯದೇ ನೆಲೆಯಲ್ಲಿ